• ನನಗೆ, ನೃಪತುಂಗ ಸಾಹಿತ್ಯ ಪ್ರಶಸ್ತಿ ದೊರೆತ ಈ ಸಂದರ್ಭದಲ್ಲಿ, 'ಪ್ರವಾಹ ಸಂತ್ರಸ್ತರ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ, ಒಂದು ಲಕ್ಷ ರೂಪಾಯಿಗಳ ಚೆಕ್ಕನ್ನು, ಮುಖ್ಯಮಂತ್ರಿಗಳಿಗೆ ತಲುಪಿಸಲು, ಮಾನ್ಯ ಸಚಿವರಾದ, ಶ್ರೀ ಜಗದೀಶ ಶೆಟ್ಟರ ಅವರಿಗೆ ನೀಡುತ್ತಿದ್ದೇನೆ.

• ಅವರು ದಯವಿಟ್ಟು ಸ್ವೀಕರಿಸಬೇಕು.

## ನೃಪತುಂಗ ಸಾಹಿತ್ಯಪ್ರಶಸ್ತಿಪ್ರದಾನ ಸಮಾರಂಭ

(೧೬-೯-೨೦೧೯)

1) • ಸಮಾರಂಭವನ್ನು ಉದ್ಘಾಟಿಸಿದ ಮಾನ್ಯ ಸಚಿವರಾದ, ಶ್ರೀ ಜಗದೀಶ ಶೆಟ್ಟರ ಅವರೆ,

• ಪ್ರಶಸ್ತಿ ಪ್ರದಾನ ಮಾಡಿದ, ಮಾನ್ಯ ಉಪಮುಖ್ಯಮಂತ್ರಿಗಳು ಸಾರಿಗೆ ಸಚಿವರು ಆದ, ಶ್ರೀ ಲಕ್ಷ್ಮಣ ಸವದಿಯವರೆ,

• ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು, ಸಭಾಧ್ಯಕ್ಷರು ಆದ, ನಾಡೋಜ, ಡಾ. ಮನು ಬಳಿಗಾರ್ ಅವರೆ

2) ಅತಿಥಿಗಳು [illegible] ಖ್ಯಾತ ವಿಮರ್ಶಕರು ಡಾ. ಜಿ. ಎಂ. ಹೆಗಡೆಯವರೆ,

• ಬೆಂಗಳೂರು ಮಹಾನಗರ ಸಭೆಯ, ಸಾರಿಗೆ ಸಂಸ್ಥೆಯ, ವ್ಯವಸ್ಥಾಪಕ ನಿರ್ದೇಶಕರಾದ, ಡಾ. ಎನ್. ವಿ. ಪ್ರಸಾದ್ ಅವರೆ,

ಆದೇ • ~~ಬೆಂಗಳೂರು ಮಹಾನಗರ ಸಭೆಯ ಸಾರಿಗೆ~~ ಸಂಸ್ಥೆಯ, ನಿರ್ದೇಶಕರಾದ, ಶ್ರೀ ಅನುಪಮ್ ಅಗ್ರವಾಲ್ ಅವರೆ,

• ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ, ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ರಾಜ್ಯಾಧ್ಯಕ್ಷರಾದ ಶ್ರೀ ಎ. ಜಿ. ಚಿಕ್ಕೇಗೌಡ ಅವರೆ, ಸಾರಿಗೆ ಸಾಹಿತ್ಯ ಸಂಪತ್ತಿನ ಅಧ್ಯಕ್ಷರಾದ [illegible] ಅವರೆ,

3) • ಮುಂದಿನ ವರ್ಷ ಪ್ರಶಸ್ತಿಗೆ ಭಾಜನರಾದ, ಶ್ರೀಮತಿ ಕೆ. ಆರ್. ಸೌಮ್ಯ ಮತ್ತು ಶ್ರೀ ಶರಣು ಹುಲ್ಲೂರು ಅವರೆ,

• ಆಯ್ಕೆ ಸಮಿತಿಯ, ಎಲ್ಲ ಸದಸ್ಯರೆ,

ಡಾ. ಜಿ. ಎಸ್. ಆಮೂರ ಸೇರಿದಂತೆ ಎಲ್ಲ ಪ್ರೇಕ್ಷಕರೆ, ಮಾನ್ಯ ಸಭಿಕರೆ, - ಎಲ್ಲರಿಗೂ ನಮಸ್ಕಾರ.

3)(B) (• ಕಳೆದ ವರ್ಷ, ಈ ಪ್ರಶಸ್ತಿಗೆ ಭಾಜನರಾದ, ಡಾ. [illegible]ನವರು, ಈ ಸಮಾರಂಭದಲ್ಲಿ ಉಪಸ್ಥಿತರಿರುವುದು, ನನಗೆ ಹೆಚ್ಚಿನ ಸಂತೋಷವನ್ನುಂಟು ಮಾಡಿದೆ.)

4) • ಈವರೆಗೆ, ನೃಪತುಂಗ ಸಾಹಿತ್ಯ ಪ್ರಶಸ್ತಿಯನ್ನು ಪಡೆದ, ಎಲ್ಲ ೧೨ ಜನ ಸಾಹಿತಿಗಳಿಗೂ ನಾನು ~~[illegible]~~ ವಂದನೆಗಳೊಂದಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

4) (B) • ೨೦೦೭ರಲ್ಲಿ, ಅಂದರೆ, ೧೨ ವರ್ಷಗಳ ಹಿಂದೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ, ಅಂದಿನ ವ್ಯವಸ್ಥಾಪಕ ನಿರ್ದೇಶಕರಾಗಿದ್ದ, ಓರಿಸ್ಸಾ ಮೂಲದ, ಶ್ರೀ ಉಪೇಂದ್ರ ತ್ರಿಪಾಠಿ, I.A.S. ಅವರ ಔದಾರ್ಯವನ್ನು ಕನ್ನಡಿಗರಾದ ನಾವು, ಸ್ಮರಿಸಬೇಕು.

5) • ಅದುವರೆಗೆ ತಮ್ಮ ಸಂಸ್ಥೆಗಾದ ಲಾಭವನ್ನು, ಅಂದರೆ, ಒಂದೂವರೆ ಕೋಟಿ ರೂಪಾಯಿ ಮೊತ್ತದ ನಿಧಿಯನ್ನು — ಕನ್ನಡಿಗರ ಹಿರಿಯ ಸಂಸ್ಥೆಯಾದ, ಕನ್ನಡ ಸಾಹಿತ್ಯ ಪರಿಷತ್ತಿಗೆ ಕೊಡಮಾಡಿ, ಅದರ ಬಡ್ಡಿಯಿಂದ ಬಂದ ಹಣವನ್ನು, 'ನೃಪತುಂಗ ಸಾಹಿತ್ಯ ಪ್ರಶಸ್ತಿ' ಎಂದು ಹೆಸರಿಸಿ —

5) (B) — ಪ್ರತಿವರ್ಷ ~~[illegible]~~ ಒಬ್ಬ ಹಿರಿಯ ಸಾಹಿತಿಗೆ ಕೊಡುತ್ತ ಹೋಗಬೇಕೆಂಬ ನಿರ್ಣಯವನ್ನು ತೆಗೆದುಕೊಂಡವರು ಶ್ರೀ ಉಪೇಂದ್ರ ತ್ರಿಪಾಠಿಯವರು, ಮತ್ತು ಅಂದಿನ, ಬೆಂಗಳೂರು ಮಹಾನಗರ ಸಭೆಯ ಸಾರಿಗೆ ಸಂಸ್ಥೆಯವರು.

6) • ~~ಶ್ರೀ ಉಪೇಂದ್ರ ತ್ರಿಪಾಠಿಯವರು, [illegible]~~

• ೨೦೦೭ರಲ್ಲಿ, ಪ್ರಥಮ ಬಾರಿಗೆ ಈ ಪ್ರಶಸ್ತಿಯನ್ನು ಪಡೆದವರು, ನಾಡೋಜ, ಡಾ. ದೇ. ಜವರೇಗೌಡರು.

• ಈಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದವರು ಪ್ರೊ. ಚಂದ್ರಶೇಖರ ಪಾಟೀಲರು.

7) • ಆ ಪ್ರಥಮ ಸಮಾರಂಭದ, ಅಧ್ಯಕ್ಷತೆ ವಹಿಸುವ ಗೌರವವನ್ನು, ನನಗೆ ನೀಡಿದ್ದರು, ~~ಅಂದಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಚಂದ್ರಶೇಖರ ಪಾಟೀಲ~~ರು. (ಅವರು)

• ಹಿಂದಿನ ವರ್ಷಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ, ನಾಡೋಜ ಡಾ. ಜಿ. ನಾರಾಯಣ ಅವರು - ಹಿಂದಿನ ಸಮಾರಂಭದಲ್ಲಿ ಪ್ರಾಯೋಜಕರನ್ನು ವಿಶೇಷ ರೀತಿಯಲ್ಲಿ ಸನ್ಮಾನಿಸಿ ಗೌರವಿಸಿದ್ದರು.

• ~~ಈ ಸಂದರ್ಭದಲ್ಲಿ, ನಾನು ಅವರಿಗೆ ಅಭಿನಂದನೆ ಸಲ್ಲಿಸಿದೆ.~~

8) • ಅಂದಿನ ಸಮಾರಂಭದಲ್ಲಿ, ಪ್ರಶಸ್ತಿ ಪ್ರದಾನ ಮಾಡಿದವರು, ಭಾರತ ಸರಕಾರದ ಯೋಜನಾ ಸಚಿವರಾದ ಮಾನ್ಯ ಶ್ರೀ ಎಂ. ವಿ. ರಾಜಶೇಖರನ್ ಅವರು.

• ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಎಚ್. ಜೆ. ಲಕ್ಕಪ್ಪಗೌಡರು, 'ನೃಪತುಂಗ ಸಾಹಿತ್ಯ ಪ್ರಶಸ್ತಿ' ಪುರಸ್ಕೃತ ನಾಡೋಜ, ಡಾ. ಜವರೇಗೌಡ ಅವರ ಬಗ್ಗೆ ಮಾತನಾಡಿದರು.

9) • ಆಗ ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಜಿ. ನಾರಾಯಣರು, ಮಹೇಂದ್ರ ಪ್ರಾಯೋಜಕರನ್ನು ಸನ್ಮಾನಿಸಿ, ಗೌರವಿಸಿದರು.

• ಹಿರಿಯ ಸಾಹಿತಿಗಳಾದ ಶ್ರೀಮತಿ ಡಾ. ನಾ. ಬಾಬುಕರ್ ಅವರು, ಅರಳು ಸಾಹಿತ್ಯ ಪ್ರಶಸ್ತಿ ಪುರಸ್ಕೃತರನ್ನು ಕುರಿತು ಪ್ರೋತ್ಸಾಹಕರ ನುಡಿಗಳನ್ನಾಡಿದರು.

[illegible] ವರ್ಷ ಪ್ರಶಸ್ತಿ [illegible]

• ೧೨ ವರ್ಷದ ಹಿಂದಿನ ಈ ಎಲ್ಲ ಸಂಗತಿಗಳು ಇನ್ನೂ ನನಗೆ ಚೆನ್ನಾಗಿ ನೆನಪಿನಲ್ಲಿವೆ.

10) • 'ಈವಂಗೆ, ದೇವಂಗೆ ಆವುದಂತರವಂತು' ಎಂದು ಕೇಳುತ್ತಾನೆ ನಮ್ಮ ಕವಿ ಸರ್ವಜ್ಞ.

• ಅದಕ್ಕೆ, ಅವನೇ ಉತ್ತರವನ್ನು ಕೊಡುತ್ತಾನೆ:

'ದೇವನು ಜಗಕೀವ, ಕೈಯಾರೆ ಈವನೇ ದೇವ' ಎಂದು, ಹೇಳುತ್ತಾನೆ.

• ದೇವರು, ಒಟ್ಟು ಜಗತ್ತಿಗೆ ಕೊಡುತ್ತಾನೆ. ಆದರೆ, ಪ್ರತ್ಯಕ್ಷ ಕೊಡುವ ವ್ಯಕ್ತಿಯೇ ದೇವ - ಎಂದು ಸರ್ವಜ್ಞ ಹೇಳುತ್ತಾನೆ.

• ಈ ಸಂದರ್ಭದಲ್ಲಿ, ಶ್ರೀ ಉಪೇಂದ್ರ ತ್ರಿಪಾಠಿಯವರ ನೆನಪು, ಮತ್ತೆ ಮತ್ತೆ ಬರುತ್ತದೆ.

---

11) • ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ, ಈ ಪ್ರಶಸ್ತಿ ಪ್ರದಾನವಾಗುತ್ತಿರುವುದು, ತುಂಬ ಔಚಿತ್ಯಪೂರ್ಣವಾಗಿದೆ.

• ಕನ್ನಡ ಸಾಹಿತ್ಯ ಪರಿಷತ್ತು, ಘಟನಾಬದ್ಧವಾದ ಹಾಗೂ ~~[illegible]~~ ಅನೇಕ ಹಿರಿಯ ಸಾಹಿತಿಗಳು, ತ್ಯಾಗ-ಸೇವೆ ಸಲ್ಲಿಸಿರುವಂತಹ ಕನ್ನಡಿಗರ ಪ್ರಧಾನಕೇಂದ್ರ.

• ಅವರ ಉದಾತ್ತವಾದ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವುದು, ಎಲ್ಲ ಸಾಹಿತ್ಯ-ಸಂಸ್ಕೃತಿ ಪ್ರೇಮಿಗಳ ಹೊಣೆಯಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

---

12) • ಈ ಘನವಾದ ಪ್ರಶಸ್ತಿಗೆ, 'ನೃಪತುಂಗ ಸಾಹಿತ್ಯ ಪ್ರಶಸ್ತಿ' ಎಂದು ಹೆಸರಿಸಿರುವುದು ಅತ್ಯಂತ ಔಚಿತ್ಯಪೂರ್ಣವಾಗಿದೆ.

• ಕುವೆಂಪು ಅವರು ತಮ್ಮ 'ಅಖಂಡ ಕರ್ನಾಟಕ' ಎನ್ನುವ ಕವಿತೆಯಲ್ಲಿ ಹೀಗೆ [illegible]: ಚಿತ್ರ ಕೊಟ್ಟಿದ್ದಾರೆ.

13) • ಈ ಕವಿತೆಯನ್ನು ಏಕೀಕರಣ ಪೂರ್ವದಲ್ಲಿಂದಲೇ ಅವರು ಬರೆದದ್ದು.

" ಅಖಂಡ ಕರ್ನಾಟಕ

ಅಲ್ತೊ, ನಮ್ಮ ನಾಲ್ಕು ದಿನದ, ರಾಜಕೀಯ ನಾಟಕ.
ನೃಪತುಂಗನೆ ಚಕ್ರವರ್ತಿ
(ಈ ಸಾಲನ್ನು ಬರೆದಾಗ ಮಾರ್ಕ ಮಾಡಿ) :
ನೃಪತುಂಗನೆ ಚಕ್ರವರ್ತಿ
ಪಂಪನಲ್ಲಿ ಮುಖ್ಯಮಂತ್ರಿ,
ರನ್ನ, ಜನ್ನ, ನಾಗವರ್ಮ
ರಾಘವಾಂಕ, ಹರಿಹರ
ಬಸವೇಶ್ವರ, ನಾರಣಪ್ಪ
ಸರ್ವಜ್ಞ, ಷಡಕ್ಷರ
ಸರಸ್ವತಿಯೆ ರಚಿಸಿದೊಂದು
ನಿತ್ಯ ಸಚಿವ ಮಂಡಲ
ತನಗೆ ರಾಜಕರ ಕುಂಡಲ. "

14) • ಅಂದರೆ, ~~ಸಂಸ್ಕೃತಿ~~ ಸಾಂಸ್ಕೃತಿಕ ಕರ್ನಾಟಕದಲ್ಲಿ ಇದೇ, ' ನಿತ್ಯ ಸಚಿವ ಮಂಡಲ '

• ರಾಜಕೀಯದಲ್ಲಿ " ಇಂದು ಬಂದು, ನಾಳೆ ಸಂದು ಹೋಗುವ ಸಚಿವ ಮಂಡಲ " - ಇಲ್ಲಿ ಇದೆ.

" ಶಿರಿಗನ್ನಡ ಸರಸ್ವತೀಯ ವಜ್ರಕರ್ಣಕುಂಡಲ " ಇದೆ.

• ~~[illegible]~~ ಕವಿಯೇ ಹೇಳುವಂತೆ, ಕನ್ನಡ ನಾಡಿನ ಸಾಂಸ್ಕೃತಿಕ ಸಾಮ್ರಾಜ್ಯದಲ್ಲಿ ' ನೃಪತುಂಗನೆ ಚಕ್ರವರ್ತಿ '

• ಇದು ಕನ್ನಡದ ಸಾಂಸ್ಕೃತಿಕ ಇತಿಹಾಸ.

• ~~ಈ [illegible] ಪ್ರಕಾರ, ನೃಪತುಂಗನ ಹೆಸರು~~ ~~[illegible] ಇಟ್ಟದ್ದು ಸಾರ್ಥಕ ಪಡಿಸಿ~~ ಮಾಡಿದೆ.

15) • ಕನ್ನಡದಲ್ಲಿ ಲಭ್ಯವಾದ ಮೊದಲ ಗ್ರಂಥವೆಂದರೆ – "ನೃಪತುಂಗದೇವಾನುಮತಮಪ್ಪ 'ಕವಿರಾಜಮಾರ್ಗಂ'."

• ನೃಪತುಂಗನಿಂದ ಅನುಮತಿಸಲ್ಪಟ್ಟು ರಚಿತವಾದದ್ದು

• ಇಂಥ ದೊರೆಯಾದ, ನೃಪತುಂಗನ ಕಾಲದ ಕನ್ನಡ ಜನ: "ಕುರಿತೋದದೆಯುಂ, ಕಾವ್ಯಪ್ರಯೋಗ ಪರಿಣತಮತಿಗಳ್" – ಆಗಿದ್ದರು.

• ಈ 'ಕವಿರಾಜಮಾರ್ಗ' ಗ್ರಂಥ, ಜಗತ್ತಿನ ಇತಿಹಾಸದಲ್ಲಿಯೇ ಮೊದಲ ಬಾರಿಗೆ, ಒಂದು ನಾಡನ್ನು, ಒಂದು ರಾಜ್ಯತ್ವವನ್ನು ಭಾಷೆಯ, ಪರಿಭಾಷೆಯಲ್ಲಿ ನಿರೂಪಿಸಿದೆ.

16) • ಕನ್ನಡ ಜನಾಂಗದ ಅಸ್ಮಿತೆಯನ್ನು, identity ಯನ್ನು – ಮೊದಲಬಾರಿಗೆ ಪ್ರಕಟಿಸಿದ ಗ್ರಂಥವಿದು.

• "ಕನ್ನಡದೊಳ್ ಭಾವಿಸಿದ ಜನಪದಂ" ಇದೇ ಆ ಅಸ್ಮಿತೆ.

• ಒಂದು ರಾಜ್ಯವನ್ನು, ಒಂದು ಭಾಷೆಯ ಮೂಲಕ ಗುರುತಿಸಿದ್ದು, ಜಗತ್ತಿನ ಯಾವ ಲಾಕ್ಷಣಿಕ ಗ್ರಂಥದಲ್ಲಾಗಲಿ, ಸಾಂಸ್ಕೃತಿಕ ಗ್ರಂಥದಲ್ಲಾಗಲಿ ಇಲ್ಲ.

17) • ಹೀಗೆ, ಜನಶಕ್ತಿ, ರಾಜಶಕ್ತಿ, ಕವಿಶಕ್ತಿ – ಈ ಮೂರೂ ಸೇರಿ ಕನ್ನಡ ಸಂಸ್ಕೃತಿಯನ್ನು ಕಟ್ಟಿವೆ.

• ಶೆಲ್ಡನ್ ಪೊಲಾಕ್ ಎಂಬ ಭಾಷಾತಜ್ಞ, ಸಂಸ್ಕೃತಿ ಚಿಂತಕ 'ಕವಿರಾಜಮಾರ್ಗ'ದಂತಹ ಮಹತ್ವದ ಗ್ರಂಥವನ್ನು ಇಂಗ್ಲಿಷಿನಲ್ಲಿ ಭಾಷಾಂತರಿಸುವ ಅಗತ್ಯವನ್ನು ಸೂಚಿಸಿದ.

17)(b) • ಆಗ, ಎರಡು ವರ್ಷಗಳ ಹಿಂದೆ, ದಿಲ್ಲಿಯ ಜವಾಹರಲಾಲ್ ನೆಹರು ಯುನಿವರ್ಸಿಟಿಯ, ಕನ್ನಡ ಅಧ್ಯಯನ ಪೀಠ ಈ ಅನುವಾದವನ್ನು ಪ್ರಕಟಿಸಿದೆ.

• ~~[illegible]~~

• ~~[illegible]~~

18.) • ಎಷ್ಟು ಸಲ ಉದಾಹರಿಸಿದರೂ, ಸವೆಯದಂಥ ಒಂದು ನುಡಿ 'ಕವಿರಾಜಮಾರ್ಗ'ದಲ್ಲಿದೆ.

• ಅದು ಇಂದಿಗೂ ಪ್ರಸ್ತುತವಾದದ್ದು. ಮುಂದೆಯೂ ಪ್ರಸ್ತುತವಾಗಬಲ್ಲುದು.

19) (ಅ) • "ಕಸವರಮೆಂಬುದು, ನೆರೆ ಸೈರಿಸಲಾರ್ಪೊಡೆ, ಪರವಿಚಾರಮುಮಂ ಪರಧರ್ಮಮುಮಂ". ಎಂಬ ಮಾತು.

• 'ಕಸವರ' ಎಂದರೆ ಹಳಗನ್ನಡದಲ್ಲಿ ಬಂಗಾರ.

• ಅನ್ಯರ ವಿಚಾರಗಳನ್ನು, ಅನ್ಯಧರ್ಮಗಳನ್ನು, ಅತ್ಯಂತ ಸಹಿಷ್ಣುತೆಯಿಂದ, ಸಹನೆಯಿಂದ, ಸೈರಿಸಿಕೊಂಡರೆ ಬದುಕು ಬಂಗಾರವಾಗಬಲ್ಲುದು, ಎಂದು ಇದರ ಅರ್ಥ.

20) • ಬಹುತ್ವದ ಸಂಸ್ಕೃತಿಯಿಂದ ಕೂಡಿದ ಭಾರತದಲ್ಲಿ, ಇದು ಇನ್ನೂ ಹೆಚ್ಚು ನಿಜ.

• ನೃಪತುಂಗನ ತಂದೆಯಾದ, ಮೂರನೆಯ ಗೋವಿಂದನ ಕಾಲಕ್ಕೆ ಕನ್ನಡನಾಡು ಎಲ್ಲಿಯವರೆಗೆ ಹಬ್ಬಿತ್ತು ಎಂದರೆ, ಅದು ಮಹಾರಾಷ್ಟ್ರ, ಗುಜರಾತ್‌ಗಳನ್ನು ಮೀರಿ ಹೋಗಿತ್ತು.

20)(b) • ನೃಪತುಂಗ ಒಬ್ಬ ವೈಷ್ಣವ ರಾಜ. ಅವನ ಆಸ್ಥಾನದಲ್ಲಿದ್ದ 'ಕವಿರಾಜಮಾರ್ಗ'ದ ಕರ್ತೃ, 'ಶ್ರೀವಿಜಯ' ಜೈನನಾಗಿದ್ದ.

21) • ಕನ್ನಡ ಮತ್ತು ಸಂಸ್ಕೃತಗಳು ಒಂದುಗೂಡಬಹುದಾದರೆ, ಜೈನ-ವೈದಿಕ ಧರ್ಮಗಳೂ ಕೂಡಿಕೊಂಡು ಇರಲು ಸಾಧ್ಯ.

21)(b) • 'ಕವಿರಾಜಮಾರ್ಗ'ದ ದೇವತಾಸ್ತುತಿಯಲ್ಲಿ, ನೃಪತುಂಗನ ಸ್ತುತಿಯನ್ನು ಸೇರಿಕೊಂಡು, ಒಂದು ಸಂಯುಕ್ತ ಪ್ರತಿಮೆಯನ್ನು ಕವಿ ಶ್ರೀವಿಜಯ ನಿರ್ಮಿಸಿದ್ದಾನೆ.

22) • ಈ ಪದ್ಯದ ಅರ್ಥ ಇಷ್ಟು: ನೀತಿಶರಕ್ಕೆ ಬದಾಯಿಯಾಗಿದ್ದ ನೃಪತುಂಗ, ವಿಷ್ಣುವಿನಂತೆ ಲಕ್ಷ್ಮಿಯನ್ನು ತನ್ನ ಎದೆಯಲ್ಲಿ ಧರಿಸಿಕೊಂಡಿದ್ದಾನೆ ಎಂಬ ಧ್ವನಿ ಅದರಲ್ಲಿದೆ.

• ಅದಕ್ಕಾಗಿಯೇ ಇರಬಹುದು, ಲಕ್ಷ್ಮೀಧರನಾದ ನೃಪತುಂಗನ ಹೆಸರನ್ನುಳ್ಳ ಈ ಪ್ರಶಸ್ತಿಯು ಮೌಲ್ಯ ಬಹಳ ಹೆಚ್ಚಿದೆ.

---

21) ನನ್ನ ಮಾತು ಮುಗಿಸುವ ಮುನ್ನ, ಪ್ರಸ್ತುತ ಸರಕಾರಕ್ಕೆ ಒಂದಿಷ್ಟು ಸಾಂಸ್ಕೃತಿಕವಾದ ಸಲಹೆಗಳನ್ನು ಸೂಚಿಸಬಹುದೆಂದು ತಿಳಿಯುತ್ತೇನೆ.

• ಮೊದಲನೆಯದಾಗಿ; ಕರ್ನಾಟಕದಲ್ಲಿ ಬಹುಶಃ 15-20 ಪ್ರಶಸ್ತಿ ಅಥವಾ ಪ್ರತಿಷ್ಠಾನಗಳಿವೆ.

• ~~ಅವಳಿ~~ ಧಾರವಾಡ-ಹುಬ್ಬಳ್ಳಿ ಅವಳಿನಗರದಲ್ಲಿಯೇ 9 ಪ್ರಶಸ್ತಿಗಳಿವೆ.

• ಈ ಎಲ್ಲ ಪ್ರಶಸ್ತಿಗಳ ಅಧ್ಯಕ್ಷರುಗಳ ಒಂದು ಮೀಟಿಂಗ್ ಮಾಡಿ, - ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ, ಯಾವಾವ ಯೋಜನೆಗಳನ್ನು ಅವು ಕೈಕೊಂಡಿವೆ? ಯಾವುದಾದರೂ ಹೊಸ ಯೋಜನೆಗಳನ್ನು ಅವು ಕೈಕೊಂಡಿವೆ? ಆರ್ಥಿಕವಾಗಿ ಯಾವ ಅಡಚಣೆಗಳಿವೆ? - ಎಂದು ವಿಚಾರಿಸಿ, ಅವುಗಳಿಗೆ | ಸರಕಾರ ನೆರವನ್ನು ನೀಡಬಹುದು.

ಸಾಹಿತ್ಯ

22) • ಎರಡನೆಯದಾಗಿ, ಸಾಂಸ್ಕೃತಿಕ ಕೇಂದ್ರವಾದ ಧಾರವಾಡದಲ್ಲಿ ನಡೆಯುವ ಸಾಹಿತ್ಯಕ ಚಟುವಟಿಕೆಗಳಲ್ಲಿ ಬಹಳ ಮುಖ್ಯವಾದದ್ದು, 'ಧಾರವಾಡ ಸಾಹಿತ್ಯ ಸಂಭ್ರಮ'.

• ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು, ಹೆಚ್ಚಿನ ಧನಸಹಾಯವನ್ನು ಒದಗಿಸುತ್ತೇವೆಂದಿದ್ದಾರೆ.

• ಕಳೆದ ವರ್ಷ ಉಮಾಶ್ರೀ ಅವರು ಧನಸಹಾಯವನ್ನು ಒದಗಿಸಿದ್ದರು.

---

22) (B) • ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸಿ. ಟಿ. ರವಿಯವರು ಇದನ್ನು ಮುಂದುವರಿಸಿಕೊಂಡು ಹೋಗುತ್ತಾರೆ ಎಂಬ ಭರವಸೆ ನನಗಿದೆ.

23) • ಮೊದಲನೆಯದಾಗಿ, ರಾಷ್ಟ್ರಧ್ವಜಕ್ಕೆ ಎಲ್ಲರ ಮನ್ನಣೆ ಇದ್ದೇ ಇದೆ.

• ಅದರ ಜೊತೆಗೆ, ಕನ್ನಡದ ಅಸ್ಮಿತೆಯಾಗಿ, ಕನ್ನಡಕ್ಕೆ ಪ್ರತ್ಯೇಕವಾದ ಧ್ವಜದ ಅಗತ್ಯವಿದೆ.

• ಕನ್ನಡ ನಾಡಿನ ಹಬ್ಬದಲ್ಲಿ, ಪ್ರತಿಯೊಂದು ಸಾಹಿತ್ಯ ಸಮ್ಮೇಳನದ ಪ್ರಾರಂಭದ ಸಮಯದಲ್ಲಿ, ರಾಷ್ಟ್ರಧ್ವಜದ ಜೊತೆಗೆ, ಕನ್ನಡ ಧ್ವಜವನ್ನು ಹಾರಿಸುತ್ತ ಬಂದಿದೆ.

• ೮೦ನೇ ಸಮ್ಮೇಳನದ ಅಧ್ಯಕ್ಷರು, ೭೦ನೇ ಸಮ್ಮೇಳನದ ಅಧ್ಯಕ್ಷರಿಗೆ ಅಧಿಕಾರ ಹಸ್ತಾಂತರ ಮಾಡುವಾಗ, ಅದರ ಸಂಕೇತವಾಗಿ, ಕನ್ನಡಧ್ವಜವನ್ನೇ ಕೊಡುತ್ತಾರೆ.

24) • ಕನ್ನಡ ಸಾಹಿತ್ಯದಲ್ಲಿ ನವೋದಯದ ಹರಿಕಾರರಾದ, ಶ್ರೀ ಬಿ.ಎಂ. ಶ್ರೀಯವರು ೧೯೩೮ರಲ್ಲಿ [illegible] 'ಕನ್ನಡ ಬಾವುಟ' ಎಂಬ ಪ್ರಾಚೀನ ಕಾವ್ಯ ಸಂಕಲನವನ್ನು ಪ್ರಕಟಿಸಿದ್ದರು.

• ಅಲ್ಲದೆ, 'ಕನ್ನಡ ಬಾವುಟ' ಎಂಬ ಕವಿತೆಯನ್ನು ಸ್ವತಃ ಬರೆದಿದ್ದರು.

• ಕನ್ನಡ ಕಾರ್ಯಕ್ರಮದ ಪ್ರಾರಂಭದಲ್ಲಿ, ಅದನ್ನು ನಾಡಗೀತೆಯಾಗಿಯೂ ಹಾಡುತ್ತಿದ್ದುದುಂಟು.

25) • ~~ಕನ್ನಡ ಸಾಹಿತ್ಯ ಪರಿಷತ್ತು~~ ಸರ್ಕಾರ ಕುವೆಂಪು ಅವರ ಗೀತೆಯನ್ನು ನಾಡಗೀತೆಯಾಗಿ [illegible]ತರದಿದೆ.

ಒಂದಾಗಿ ಎಲ್ಲರಿಂದಲೂ [illegible]

• ಕನ್ನಡಕ್ಕೆ ಪ್ರತ್ಯೇಕ 'ನಾಡಗೀತೆ' ಒಪ್ಪಲ್ಪಡುವುದಾದರೆ, ಕನ್ನಡಕ್ಕೆ ಪ್ರತ್ಯೇಕ ಧ್ವಜ ಏಕಿರಬಾರದು?

• ನಾಲ್ಕನೆಯದಾಗಿ

26) • ~~ಕೊನೆಯದಾಗಿ~~, ಧಾರವಾಡದ 'ಮಲ್ಲಿಕಾರ್ಜುನ ಮನ್ಸೂರ್' [illegible] [illegible] ಭಾಷೆ [illegible] ಮಾತನಾಡಿದೆ.

• [illegible] ಕನ್ನಡ ಸಾಂಸ್ಕೃತಿಕ [illegible] ದಕ್ಷಿಣ [illegible] ಎಲ್ಲರಿಗೂ ದಕ್ಕುವಂತಾಗಬೇಕು.

• [illegible] ಭಾಷೆ [illegible] ಇದರ ಕಡೆಗೆ ಮನಸ್ಸು [illegible] ಶ್ರೀ [illegible] ಅವರು. [illegible] ಭಾವಿಸುತ್ತೇನೆ.

26) ~~• ಕನ್ನಡಿಗನಾಗಿ, ಇಂದಿನ ಸಮಾರಂಭದಲ್ಲಿ ಭಾಗವಹಿಸಿದ
ಮಾನ್ಯ ಸಚಿವರಿಗೆ
• ಬೆಂಗಳೂರು ಮಹಾನಗರ ಪಾಲಿಕೆ ಸಂಸ್ಥೆಗೆ
• ಕನ್ನಡ ಸಾಹಿತ್ಯ ಪರಿಷತ್ತಿಗೆ
• ಹಾಗೂ ಸಮಿತಿಯ ಎಲ್ಲ ಸದಸ್ಯರಿಗೆ
• ಮತ್ತೊಮ್ಮೆ ಕೃತಜ್ಞತೆಗಳನ್ನು ಸಲ್ಲಿಸಿ, ನನ್ನ ಮಾತು ಮುಗಿಸುತ್ತೇನೆ.~~

27) • ಒಬ್ಬ ಕನ್ನಡಿಗನಾಗಿ, - ಬ್ಯಾಂಕಿಂಗ್ ಪರೀಕ್ಷೆಗಳನ್ನು,
ಕನ್ನಡದಲ್ಲೂ ಬರೆಯಲು, ಕೇಂದ್ರ ಹಣಕಾಸು ಸಚಿವೆ,
ನಿರ್ಮಲಾ ಸೀತಾರಾಮನ್, ಅವರು ನೀಡಿದ ಭರವಸೆ ಖುಷಿಯಾಗಿದೆ.
• ಕರ್ನಾಟಕದಿಂದ ಆಯ್ಕೆಗೊಂಡ, ಎಲ್ಲ ಸಂಸದರು, ಒತ್ತಡ
ತಂದು, ಈ ತೀರ್ಮಾನವನ್ನು ಜಾರಿಗೊಳಿಸಬೇಕು.
✓ • ~~[illegible]~~ [illegible]?

29) • ಕನ್ನಡಿಗನಾಗಿ, ಇಂದಿನ ಸಮಾರಂಭದಲ್ಲಿ ಭಾಗವಹಿಸಿದ
ಮಾನ್ಯ ಸಚಿವರಿಗೆ,
• ಬೆಂಗಳೂರು ಮಹಾನಗರ ಪಾಲಿಕೆ ಸಂಸ್ಥೆಗೆ,
• ಕನ್ನಡ ಸಾಹಿತ್ಯ ಪರಿಷತ್ತಿಗೆ,
• ಹಾಗೂ ಸಮಿತಿಯ ಎಲ್ಲ ಸದಸ್ಯರಿಗೆ,
- ಮತ್ತೊಮ್ಮೆ ಕೃತಜ್ಞತೆಗಳನ್ನು ಸಲ್ಲಿಸಿ, ನನ್ನ ಮಾತು ಮುಗಿಸುತ್ತೇನೆ.

28) • ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಅವರು, 'ಹಿಂದಿ, ಇಡೀ ದೇಶದ
ಭಾಷೆ ಆಗಬೇಕು' ಎಂದು ಹೇಳಿಕೆ ನೀಡಿದ್ದಾರೆ.
• ಭಾರತ ಹಲವು ಭಾಷೆಗಳ ಬೀಡು. ಎಲ್ಲವೂ ರಾಷ್ಟ್ರ ಭಾಷೆಗಳೇ.
• ಭಾಷೆ ಕೇವಲ ಸಂವಹನಕ್ಕೆ ಇರುವ ಸಾಧನವಲ್ಲ. ಅದರೊಂದಿಗೆ
ಒಂದು ಸಂಸ್ಕೃತಿ ಇದೆ. ಭಾಷೆಗೆ ಧಕ್ಕೆಯಾದರೆ, ಸಂಸ್ಕೃತಿಯೂ ನಾಶವಾಗುತ್ತದೆ.
• ಇದರಿಂದ ಈ ವೈವಿಧ್ಯವನ್ನು ಕಾಪಾಡಿಕೊಳ್ಳಬೇಕು. [illegible]
• ಸರ್ವ ಭಾಷಾ ಸಹಬಾಳ್ವೆ [illegible]

**ನಾಡೋಜ ಡಾ. ಚೆನ್ನವೀರ ಕಣವಿ**
'ಚೆಂಬೆಳಕು'. ೯ನೇಯ ಅಡ್ಡ ರಸ್ತೆ,
ಕಲ್ಯಾಣ ನಗರ,
ಧಾರವಾಡ-೫೮೦ ೦೦೭.

☎ : ೦೮೩೬-೨೨೨೭೨೭೭